**ಜೂನ್**, 2019

## ಮೇಷ



ಅಡ್ಡದಾರಿಗಳಿಂದ ಬರುವ ಉತ್ತಮ ಫಲಿತಾಂಶಕ್ಕಾಗಿ ಹಾತೊರೆಯದೇ ಸಾಧನೆಯ ಮಾರ್ಗವನ್ನು ಅನುಸರಿಸಿ. ಪೂರ್ವಗ್ರಹವಿಲ್ಲದೇ ಸಜ್ಜನರನ್ನು ನಂಬಿ. ದೊಡ್ಡ ವ್ಯಾವಹಾರಿಕ ಘಟನೆಗಳು ನಡೆಯಬಹುದು. ಅಪಾತ್ರದಾನ ಬೇಡ.

**ಶುಭ:** 1, 13, 23

**ಅಶುಭ:** 2, 6, 26

## ವೃಷಭ



ಪ್ರತಿಫಲ ನಿರೀಕ್ಷಿಸದೇ ಕೆಲಸ ಮಾಡಿ. ನೈಸರ್ಗಿಕ ನಿಯಮವನ್ನು ಮೀರಿ ಕೆಲಸ ಮಾಡಬೇಡಿ. ಸಾಗಿದ್ದು ಸಾಗುತಿರಲಿ. ನಿಮ್ಮ ಬದುಕು ನಿಮಗಿರಲಿ. ಧನಾಗಮನದ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ.

**ಶುಭ:** 2, 4, 6, 26

**ಅಶುಭ:** 13, 25

## ಮಿಥುನ




ಬದುಕು ಬಹು ಸುಂದರ ಎಂಬ ನಿಮ್ಮ ಅನಿಸಿಕೆ ಆಗಾಗ ನಿಜವಾಗಲಿದೆ. ಸ್ವಾತಂತ್ರ್ಯದ ಮಿತಿಯನ್ನು ಅರಿತು ಸಂತಸವನ್ನು ಅನುಭವಿಸಿ. ದೇಹಾರೋಗ್ಯವನ್ನು ಗಮನಿಸಿ, ಲಘು ಪೇಯಗಳನ್ನು ಸೇವಿಸಿ.

**ಶುಭ:** 3, 13, 23

**ಅಶುಭ:** 4, 6, 24

## ಕರ್ಕಾಟಕ



ಮನಸ್ಸಿಗೆ ಸರಿ ಎನಿಸುವ ಕೆಲಸವನ್ನೇ ಮಾಡಿ. ಹೆಚ್ಚಿನ ಮಾತುಗಳಿಗೆ ಕಡಿವಾಣ ಹಾಕಿ. ಯಾವುದೇ ಕ್ಲಿಷ್ಟಕರ ಸಂಗತಿಗಳಿಗೆ ತಲೆ ಕೆಡಿಸಿಕೊಳ್ಳದೇ ಸ್ಥಿತಪ್ರಜ್ಞತೆಯನ್ನು ಕಾಪಾಡಿಕೊಳ್ಳಿ. ಹೆಚ್ಚಿನ ವಿಶ್ರಾಂತಿ ಪಡೆಯಿರಿ.

**ಶುಭ:** 4, 14, 26

**ಅಶುಭ:** 8, 3, 13

## ಸಿಂಹ



ಕೂಡಿಬಂದ ಕಾಲವನ್ನು ಸದುಪಯೋಗ ಮಾಡಿಕೊಳ್ಳಿ. ಜೀವನದಲ್ಲಿ ಶುಭಗಳಿಗೆಯ ಸದುಪಯೋಗ ಬಹಳ ಮುಖ್ಯ. ಅಧೀನ ಸಿಬ್ಬಂದಿಗಳ ಅದಕ್ಷತೆಯಿಂದ ತೊಂದರೆಯಾಗಬಹುದು.

**ಶುಭ:** 5, 15, 25

**ಅಶುಭ:** 4, 12, 14, 24

## ಕನ್ಯಾ



ಆಶಾವಾದ ಮತ್ತು ಭ್ರಮೆಯ ನಡುವಿನ ವ್ಯತ್ಯಾಸವನ್ನು ಗಮನಿಸಿ, ಅಸಮಾಧಾನ ದೂರಾಗಲಿದೆ. ಬದುಕು ನಿರಾತಂಕವಾಗಿ ಸಾಗಲಿದೆ. ದೇವತಾರಾಧನೆ ಹಾಗೂ ಸತ್ಪಾತ್ರರಿಗೆ ದಾನ ಮುಖ್ಯ.

**ಶುಭ:** 6, 16, 24

**ಅಶುಭ:** 5, 1, 21